**ದಿ : 07-04-2025 ರಂದು ಸಾಕ್ಷಿ ದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ **ಸವಾಲು 2ನೇ ಎದುರುದಾರರ ಪರ ಶ್ರೀ ಟಿ.ಎಂ.ಪಿ ವಕೀಲರಿಂದ :**

ಅಪಘಾತ ಆದ ಕಾರಿನಲ್ಲಿ ನನ್ನ ಮಗ ಮುಂಭಾಗದಲ್ಲಿ ಅಜ್ಜನ ಜೊತೆ ಕುಳಿತುಕೊಂಡಿದ್ದ. ನಾನು ಸದರಿ ಕಾರಿನ ಹಿಂದಿನ ಸಿಟಿನಲ್ಲಿ ಕುಳಿತುಕೊಂಡಿದ್ದೆ. ನನ್ನ ಮಗನಿಗೆ ಎಡಕಾಲಿಗೆ ಪೆಟ್ಟಾಗಿರುತ್ತದೆ. ನನ್ನ ಮಗ ಪ್ರಥಮವಾಗಿ ಕಲ್ಘಟಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಕಿಮ್ಸ್ ಆಸ್ಪತ್ರೆ ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಪಡೆದು ನಂತರ ಚಿನ್ಮಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ, ಆದರೆ ಒಳರೋಗಿಯಾಗಿ ದಾಖಲಾಗಿಲ್ಲ. ನನ್ನ ಮಗನಿಗೆ ಶಸ್ತಚಿಕಿತ್ಸೆ ಮಾಡಿದ್ದಾರೆ. ಚಿಕಿತ್ಸೆಯ ನಂತರ ಗಾಯಗಳು ಗುಣವಾಗಿವೆ ಎಂದರೆ ಸರಿ.

ಅಪಘಾತವಾಗುವ ಸಮಯದಲ್ಲಿ ನನ್ನ ಮಗ ಅಮಾಸೆಬೈಲಿನ ಸರ್ಕಾರಿ ಅಂಗನವಾಡಿಗೆ ಹೋಗುತ್ತಿದ್ದ. ನನ್ನ ಮಗನ ಶೈಕ್ಷಣಿಕ ವರ್ಷ ಕುಂಠಿತವಾಗಿಲ್ಲ ಎಂದರೆ ಸರಿ. ಈಗ ನನ್ನ ಮಗ ಸಂಪೂರ್ಣ ಗುಣವಾಗಿದ್ದಾನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಿದಷ್ಟು ಹಣ ಪ್ರಯಾಣಕ್ಕಾಗಿ, ಊಟೋಪಚಾರಕ್ಕಾಗಿ ಹಾಗೂ ಇನ್ನಿತರ ಸಾಂದರ್ಭಿಕ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಕೋರಿ ಅರ್ಜಿಯನ್ನು ಕಾಲಮಿತಿಯೊಳಗೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಪರಿಹಾರ ಪಡೆಯಲು ಬದ್ಧರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**